CLAUSE 2

MADAM SPEAKER.—I will now take up clause by clause consideration. The question is :

"That Clause 2 do stand part of the Bill"

(The motion was adopted)

Clause 2 was added to the Bill.

CLAUSE 1, ETC.,

MADAM SPEAKER.—The question is :

"That Clause 1, the Long Title, the Preamble and the Enacting Formula do stand part of the Bill".

(The motion was adopted)

Clause 1, the long Title, the Preamble and the Enacting Formula were added to the Bill.

MOTION TO PASS

SRI MALLIKARJUNA KHARGE.—I move :

"That the Karnataka Secondary Education Examination Board (Amendment) Bill, 1977 be passed."

MADAM SPEAKER.—Motion moved. The question is :

"That The Karnataka Secondary Education Examination Board (Amendment) Bill, 1977 be passed."

(The motion was adopted and the Bill was passed.)

The Karnataka State Servants (Determination of Age) (Amendment) Bill, 1977.

Motion to consider

SRI H.M.CHANNABASAPPA (Minister for Health).—Madam Speaker, on behalf of the Chief Minister, I beg to move :

"That the Karnataka State Servants (Determination of Age) (Amendment) Bill, 1977 be taken into consideration."

MADAM SPEAKER.—Motion moved :

"That the Karnataka State Servants (Determination of Age) (Amendment) Bill, 1977 be taken into consideration."

† SRI H. M. CHANNABASAPPA.—Madam Speaker, this is a very simple Bill and does not require much elucidation. This Bill bars the jurisdiction of Courts in the matter of the determination of age. What is happening is some people approach the court for determining the age and request the court to direct the concerned authority to make a change in the date of birth and age, and he will obtain a decree. Though it might have been a party Government would not have been effectively contested, because the interests of the Government were not directly involved. In certain cases, persons have obtained declarations regarding their age from courts before they entered Government service and produced them as evidence of this date of birth and age after entering Government service. It is, not desirable to accept such declarations without verifications, as the decisions would not be after an effective contest and as the interests of Government were not affected as he was not a Government servant. This has led to a lot of anomalies and it is therefore necessary that when a Government servant enters service, if he wants determination of age by the court, he will be welcome to do it and Government will have an opportunity to contest it and see that it is properly determined. The purpose of this amendment is only to that extent and therefore, there is no necessity to make a big speech on this. I request the motion may please be adopted.

† ಶ್ರೀ ಎ ಎನ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ಒಹಳ ಸಿಂಪಲ್ ಬಿಲ್ ಆಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರು. ಇದು ನೋಡುವುದಕ್ಕೆ ಸಿಂಪಲ್ ಆಗಿದೆ. ಆದರೆ ಈ ಮಸೂದೆಯನ್ನು ನೋಡಿದಾಗ ಕೋರ್ಟಿನಲ್ಲಿ ಕೊಡುವ ತೀರ್ಮಾನದ ಬಗ್ಗೆ ಸರ್ಕಾರಕ್ಕೆ ವಿಶ್ವಾಸ ಇಲ್ಲದ ಕಾರಣದಿಂದಾಗಿ ಇಂಥ ಒಂದು ಬಿಲ್ಲನ್ನು ಇಲ್ಲಿ ತಂದಿದ್ದಾರೆಂದು ನನಗೆ ಅನಿಸುತ್ತದೆ. ಮಾನ್ಯ ಸಚಿವರು ಇದರಲ್ಲಿನ ವಿಷಯವನ್ನು ಅರ್ಧ ಮುಚ್ಚಿಟ್ಟು ಅರ್ಧ ಬಿಚ್ಚಿಟ್ಟು ಹೇಳಿದರೆ ಏನೂ ಪ್ರಯೋಜನವಿಲ್ಲ. ಇದರ ಒಳಗಿನ ವಿಷಯವನ್ನು ಸ್ಪಷ್ಟವಾಗಿ ಒಪ್ಪಿಕೊಂಡರೆ, ನಾವೂ ಇದರ ಮೇಲೆ ಮಾತನಾಡಲು ಅವಕಾಶವಾಗುತ್ತದೆ. ಒಂದು ವೇಳೆ ಕೋರ್ಟ್‌ನಲ್ಲಿ ಕೊಡುವ ಡಿಕ್ಲರೇಷನ್ ಸರಿಯಾಗಿರುವುದಿಲ್ಲ, ಫ್ರಾಜ್ಯುಡ್‌ಕೇಟೆಡ್ ಡಿಕ್ಲರೇಷನ್ ತರಬಹುದು ಎಂದು ತಪ್ಪಿಗೆ ಏನಾದರೂ ಮನಸ್ಸಿನಲ್ಲಿ ಅನುಮಾನವಿದ್ದರೆ. ಅದನ್ನು ಸಭೆಗೆ ತಿಳಿಸಬೇಕು. ಅದರೆ, ಈ ರೀತಿ ಕಣ್ಣುಮುಚ್ಚಾಲೆ ಆಡುವುದು ಬೇಡ. ಕೋರ್ಟ್ ಕೊಡುವ ಡಿಕ್ಲರೇಷನ್ ಒಗ್ಗೆ ನಮಗೆ ಅನುಮಾನ ಇದೆ ಎಂದು ಸ್ಪಷ್ಟವಾಗಿ ಹೇಳಿ.

ತಾವು ಈ ತರಹದ ಲೆಜಿಸ್ಲೇಷನ್ ತರಬಾರದಾಗಿತ್ತು. ಇದರ ಬದಲು ಯಾರಾದರೂ ಹುಟ್ಟಿದ ತಾರೀಖಿನ ಬಗ್ಗೆ ಕೋರ್ಟ್‌ನಲ್ಲಿ ಏನಾದರೂ ಡಿಕ್ಲರೇಷನ್ ಕೊಟ್ಟರೆ ಸರ್ಕಾರವನ್ನು ಒಂದು ಪಾರ್ಟಿಯನ್ನಾಗಿ ಮಾಡಬೇಕು. If Government is made as a party, then it would be possible for the Government Pleader to collect statistics, birth extracts etc., and contest in the Court about the correctness of the declaration ಈ ರೀತಿ ಮಾಡದೆ, ಕೋರ್ಟಿಗಿರುವಕ್ಕಂದ ಒಂದು ಹಕ್ಕನ್ನೇ ಮೊಟಕು ಮಾಡಿದ್ದೀರಿ. ಇದೊಂದು ಸಿಂಪಲ್ ಲೆಜಿಸ್ಲೇಷನ್ ಎಂದು ಹೇಳಿ ಕೋರ್ಟಿಗೆ ಇದ್ದಂಥ ಅಧಿಕಾರವನ್ನು ಮೊಟ್ಟ ಹಾಕಿದ್ದೀರಿ. ಹುಟ್ಟಿದ ತಾರೀಖು ಇಲ್ಲದವರು ಕೋರ್ಟಿನ ಮುಂದೆ ಹೋಗಿ ಡಿಕ್ಲರೇಷನ್ ಕೊಟ್ಟು ತಮ್ಮ ಹುಟ್ಟಿದ ತಾರೀಖಿನ ಬಗ್ಗೆ ಅಫಿಡವಿಟ್ ಪಡೆದುಕೊಳ್ಳುತ್ತಾರೆ. ಇಂತಹವರ ಸಂಖ್ಯೆ ಹೆಚ್ಚೇನೂ ಇರುವುದಿಲ್ಲ ಆದರೂ ಸಹ ಇಂತಹವರು ಸರ್ಕಾರೀ ನೌಕರಿಗೆ ಸೇರಲು ಇದ

ರಿಂದ ತೊಂದರೆಯಾಗಿದೆ. ಮೈಯುಕ್ತಿಕವಾಗಿ ಹೇಳಬೇಕೆಂದರೆ ನನ್ನ ಹುಟ್ಟಿದ ತಾರೀಖಿನ್ನೇ ತಿಳಿದು ಕೊಳ್ಳಲು ನನಗೆ ಸಾಧ್ಯವಾಗಿಲ್ಲ. ಹಿಂದೆ ನಮ್ಮ ಭಾಗದಲ್ಲಿ ಅಂದರೆ ನಿಜಾಮರ ಕಾಲದಲ್ಲಿ ಹುಟ್ಟಿದ ತಾರೀಖು ಮತ್ತು ಜನವಿಯನ್ನು ಜನ್ಮಕುಂಡಲಿಯಲ್ಲಿ ನಮೂದು ಮಾಡುತ್ತಿರಲಿಲ್ಲ. ಕೆಲವರು ಇಸವಿಗೆ ಬದಲು ಹಿಜರಿ ಎಂದು ನಮೂದು ಮಾಡುತ್ತಿದ್ದರೆ ಮತ್ತೆ ಕೆಲವರು ಶಾಲಿವಾಹನ ಶಕ ಎಂದು ನಮೂದು ಮಾಡುತ್ತಿದ್ದರು. ಇದರಿಂದ ಹುಟ್ಟಿದ ತಾರೀಖು ಸಿಗುವುದು ಕಷ್ಟವಾಗುತ್ತದೆ. ಶಾಲೆಗೆ ಸೇರುವಾಗ ಅಥವಾ ಎಸ್.ಎಸ್.ಸಿ ಅವರು ಹುಟ್ಟಿದ ತಾರೀಖು ಬೇಕು ಎಂದು ಕೇಳಿದಾಗ ಕೋರ್ಟಿನ ಮುಂದೆ ಹೋಗಿ ಡಿಕ್ಲೆರೇಷನ್ ಕೊಟ್ಟು ಅಫಿಡವಿಟ್ ಪಡೆಯುತಕ್ಕಂಥ ಒಂದು ಪದ್ಧತಿ ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಈ ರೀತಿ ಕೋರ್ಟಿನ ಮುಂದೆ ಕೊಟ್ಟಂತಹ ಡಿಕ್ಲೆರೇಷನನ್ನು ಮಾನ್ಯ ಮಾಡುವುದಿಲ್ಲವೆಂದು ತಾವು ಹೇಳುವುದಾದರೆ, ಈಗಾಗಲೇ ಸರ್ವೀಸ್ ನಲ್ಲಿರತಕ್ಕಂಥ ಅನೇಕ ಜನ ನೌಕರರನ್ನು ಡಿಬಾರ್ ಮಾಡಿದಂತಾಗುತ್ತದೆಯಲ್ಲದೆ, ಕೋರ್ಟ್‌ಗೆ ಇಲ್ಲಿಯವರೆಗೆ ಇದ್ದಂಥ ಅಧಿಕಾರವನ್ನು ಮಟ್ಟ ಹಾಕಿದಂತೆ ಆಗುತ್ತದೆ. ಆದ್ದರಿಂದ ತಾವು ಈ ಬಗ್ಗೆ ಮತೊಮ್ಮೆ ವಿಚಾರ ಮಾಡಿ ನೋಡಬೇಕು. ಈಗಿರುವ ಮಸೂದೆಯನ್ನು ಇದೇ ರೀತಿ ಪಾಸ್ ಮಾಡುವುದರಿಂದ ಮುಂದೆ ಬಹಳ ಕಾಂಟ್ರವರ್ಸಿ ಬರುತ್ತದೆ. ಮತ್ತು ಪ್ರಜಾಪ್ರಭುತ್ವದಲ್ಲಿ ಕೋರ್ಟ್‌ಗಿರುವ ಅಧಿಕಾರವನ್ನು ಪೊಟಕು ಮಾಡುವುದು ಸರಿಯಲ್ಲವಾದ ಕಾರಣ ತಾವು ಈ ಬಗ್ಗೆ ಅಡ್ವೊಕೇಟ್ ಜನರಲ್ ಆಫರ ಮತ್ತು ಹೈಕೋರ್ಟ್‌ನವರ ಒಪೀನಿಯನ್ ಪಡೆದುಕೊಂಡು ನಂತರ ಮುಂದಿನ ಹೆಜ್ಜೆ ಇಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಇದು ಮಾನ್ಯ ಮಂತ್ರಿಗಳು ಹೇಳಿದಂತೆ ಸಿಂಪಲ್ ಲೆಜಿಸ್ಲೇಷನ್ ಅಲ್ಲವಾದಕಾರಣ ಇದನ್ನು ಕನ್ಸಿಡರೇಷನ್‌ಗೆ ಮೂವ್ ಮಾಡದಂತೆ ವಿತ್‌ಡ್ರಾ ಮಾಡಿಕೊಳ್ಳಬೇಕಾಗಿ ಅವರನ್ನು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕಂಥ ಈ ಮಸೂದೆ ಏನಿದೆ, ಇದು ಜನ್ಮದ ತಾರೀಖಿಗೆ ಸಂಬಂಧಪಟ್ಟಿದ್ದು. ಈ ಬಗ್ಗೆ ನನ್ನ ಸ್ನೇಹಿತರಾದಂಥ ಶ್ರೀ ವಿ.ಎನ್.ಪಾಟೀಲರು ಏನು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ ಅದು ಸಾದರ ಪೂರ್ವಕವಾದುದೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಏಕೆಂದರೆ ಯಾರಾದರೂ ಸರ್ಕಾರದ ಸರ್ವಿಸ್‌ಗೆ ಸೇರುವುದಕ್ಕೆ ಮುಂಚೆ ನ್ಯಾಯಾಲಯದಲ್ಲಿ ತಮ್ಮ ಹುಟ್ಟಿದ ತಾರೀಖಿನ ಬಗ್ಗೆ ಡಿಕ್ಲೇರ್ ಮಾಡಿಕೊಂಡು ಆ ಬಗ್ಗೆ ಅಫಿಡವಿಟ್ ಪಡೆದುಕೊಂಡಿದ್ದರೆ, ಆದು ಸರ್ಕಾರದ ಸರ್ವಿಸ್‌ಗೆ ಸೇರಿದ ಮೇಲೆ ಈ ತಿದ್ದುಪಡಿ ಮಸೂದೆಯ ಪ್ರಕಾರ ಸಿಂಧುವಾಗುವುದಿಲ್ಲವೆನ್ನುವುದು ತಮ್ಮ ಅಭಿಪ್ರಾಯವಾದರೆ ಆದು ಅಷ್ಟು ಸೂಕ್ಷ್ಮವಾಗಿ ಕಾಣುವುದಿಲ್ಲ. ಇವತಂದೆ ಅವರು ನೌಕರಿ ಕಳೆದುಕೊಳ್ಳಬೇಕಾಗಿ ಬರುತ್ತದೆ. ಈಗ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಎಷ್ಟೋ ಜನರಿಗೆ ಹುಟ್ಟಿದ ತಾರೀಖೇ ಗೊತ್ತಿಲ್ಲ. ನಮ್ಮಲ್ಲಿ ಶೇಕಡಾ ೫೦ರಷ್ಟು ಜನರು ಜಾತಕ ಬರಸುವ ಹವ್ಯಾಸಕ್ಕೆ ಹೋಗುವುದಿಲ್ಲ. ಯಾರಾದರೂ ಹಳ್ಳಿಯ ಹಿರಿಯರನ್ನು ನೀವು ಹುಟ್ಟಿದ್ದು ಯಾವಾಗ ಎಂದು ಕೇಳಿದರೆ, ದೊಡ್ಡ ಮಳೆ ಬಂದ ವರ್ಷದಲ್ಲಿ ಹುಟ್ಟಿದ್ದು ಎಂದು ಹೇಳುತ್ತಾರೆ! ಈ ರೀತಿ ಏನನ್ನೋ ನೆನಪು ಇಟ್ಟುಕೊಂಡು ತಮ್ಮ ಹುಟ್ಟಿದ ತಾರೀಖನ್ನು ಹೇಳುತ್ತಾರೆ. ಅದೇರೀತಿ ಮಾನ್ಯ ಶ್ರೀ ಜೆನ್ನ ಬನಶ್ಪನವರದ್ದೋ ಅಗಲೀ, ಅಥವಾ ಅವರ ಪೂರ್ವಜರದ್ದೋ ಅಗಲೀ ಜಾತಕ ಇದೆ ಎಂದು ನನಗನ್ನಿಸುವುದಿಲ್ಲ. ಶತಮಾನಗಳಿಂದ ಲೆಕ್ಕ ತೆಗೆದುಕೊಂಡರೆ ನಮ್ಮ ಪೂರ್ವಜರೇನೂ ಅಷ್ಟು ವಿದ್ಯಾವಂತರಲ್ಲ. ಯಾರಾದರೂ ಕಾಲೇಜು ವಿದ್ಯಾಭ್ಯಾಸಕ್ಕೆ ಹೋದಾಗ, ಅಲ್ಲಿ ಹುಟ್ಟಿದ ತಾರೀಖು ಬೇಕು ಎಂದು ಕೇಳಿದಾಗ, ಅನಿವಾರ್ಯವಾಗಿ ಬೇರೆ ಮಾರ್ಗವಿಲ್ಲದೆ ನ್ಯಾಯಾಲಕ್ಕೆ ಹೋಗಿ ಒಂದು ಅಂದಾಜಿನಲ್ಲಿ ಇಂತಹ ತಾರೀಖಿನಲ್ಲಿ ನಾನು ಹುಟ್ಟಿರಬೇಕು ಎಂದು ಮೊಗಂ ಆಗಿ ಒಂದು ಡಿಕ್ಲೆರೇಷನ್ ಕೊಟ್ಟು ತಮ್ಮ ಜನ್ಮ ದಿನಾಂಕವನ್ನು ನಿಗಿದಿ ಮಾಡಿಸಿಕೊಳ್ಳುತ್ತಾರೆ. ಆದರೆ ಸರ್ಕಾರದ ನೌಕರಿಗೆ ಸೇರಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿಸಿದ್ದಲ್ಲ. ಈ ರೀತಿ ಹುಟ್ಟಿದ ತಾರೀಖನ್ನು ನಿಗದಿಪಡಿಸಿಕೊಂಡಿದ್ದರೆ ಅದು ಸರ್ಕಾರೀ ನೌಕರಿಗೆ ಸೇರುವಾಗ ತೊಂದರೆಯಾಗುತ್ತದೆಂದು ತಾವು ಹೇಳುವುದಾದರೆ, ಹೆಚ್ಚುಕಡಿಮೆ ಯಾರು ಅವಿದ್ಯಾವಂತರ ಕುಟುಂಬದಿಂದ ಓದಿ ಮುಂದೆ ಬಂದಿದ್ದಾರೆ ಅವರುಗಳು ಸರ್ಕಾರೀ ನೌಕರಿಗೆ ಬರುವುದಕ್ಕೆ ಒಂದು ದೊಡ್ಡ ತಡೆಯಾಗುತ್ತದೆಂದು ಹೇಳುತ್ತೇನೆ. ನಿಜವಾಗಿಯೂ ಅವರಿಗೆ ತೊಂದರೆಯನ್ನು ಉಂಟುಮಾಡತಕ್ಕಂಥ ತಂತ್ರ ಇದಾಗಿದೆ

ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗೆ ನೋಡಿದರೆ ಸರ್ಕಾರದ ಕೆಲಸಕ್ಕೆ ಸೇರಿದ ಮೇಲೂ ಸಹ ಹುಟ್ಟಿದ ತಾರೀಖನ್ನು ಅನುಮಾನಸ್ಪದವಾಗಿ ಡಿಕ್ಲೇರ್ ಮಾಡಿಕೊಳ್ಳಲು ಅವಕಾಶವಿದೆ. ಹೆಚ್ಚುಕಾಲ ಸರ್ವಿಸ್‌ನಲ್ಲಿರಬೇಕೆಂದು 59 ವರ್ಷ ವಯಸ್ಸಾಗಿದ್ದರೂ ಸಹ ತಮಗೆ 55 ಇಲ್ಲವೆ 52 ಎಂದು ಡಿಕ್ಲರೇಷನ್ ಮಾಡಿಕೊಳ್ಳಲು ಈಗ ಅವಕಾಶವಿದೆ. ಸರ್ಕಾರೀ ನೌಕರರು ಈ ವಿಚಾರದಲ್ಲಿ ಬುದ್ಧಿವಂತರಾಗಿರುತ್ತಾರೆ. ಇದರ ಬದಲು ನೌಕರಿಗೆ ಸೇರುವುದಕ್ಕೆ ಮೊದಲೇ ಅವರು ತಮ್ಮ ಹುಟ್ಟಿದ ತಾರೀಖಿನ ಬಗ್ಗೆ ಡಿಕ್ಲರೇಷನ್ ಮಾಡಿಕೊಂಡಿದ್ದರೆ ಅದೇ ಸರಿಯಾದ ತಾರೀಖು ಎಂದು ತಾವು ಮಾನ್ಯತೆ ಮಾಡಬೇಕು. ಈ ರೀತಿ ಮಾಡದೆ ಸರ್ವಿಸ್‌ಗೆ ಸೇರಿದ ಮೇಲೆ ಅವರು ಡಿಕ್ಲೇರ್ ಮಾಡಿಕೊಂಡ ಹುಟ್ಟಿದ ತಾರೀಖನ್ನೇ ಸಿಂಧು ಮಾಡುತ್ತೇವೆಂದು ತಾವು ಹೇಳುವುದಾದರೆ ಅದು ಆರೋಗ್ಯಕರವಾದಂಥ ವಿಧಾನವಲ್ಲವೆಂದು ಹೇಳುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ಇದೇ ರೀತಿ ಪಾಸ್ ಮಾಡುವುದಾದರೆ ಈಗಾಗಲೇ ಕೆಲಸದಲ್ಲಿರತಕ್ಕಂಥ ಲಕ್ಷೋಪಲಕ್ಷ ನೌಕರರಿಗೆ ತೊಂದರೆಯಾಗುವುದಲ್ಲದೆ ಇನ್ನು ಮುಂದೆ ನೌಕರಿಗೆ ಸೇರುವವರಿಗೂ ಸಹ ತೊಂದರೆಯಾಗುವುದರಿಂದ ಇದನ್ನು ತಾವು ಮತ್ತೊಮ್ಮೆ ಕೂಲಂಕಷವಾಗಿ ವಿಚಾರ ಮಾಡಿ, ನಂತರ ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಮಂಡನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್ ಎಂ. ಚನ್ನಬಸಪ್ಪ.–ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಏ ಎನ್. ಪಾಟೀಲ್ ಹಾಗೂ ಮಾನ್ಯ ಕೋಣಂದೂರು ಲಿಂಗಪ್ಪನವರ ಮನಸ್ಸಿನಲ್ಲಿ ಏನೋ ಅನುಮಾನ ಉಂಟಾಗಿದೆ. ಅದಕ್ಕೆ ಕಾರಣವೇನೆಂಬುದು ಗೊತ್ತಿಲ್ಲ. ಈಗ ಒಬ್ಬ ಸರ್ಕಾರೀ ನೌಕರನ ಹುಟ್ಟಿದ ತಾರೀಖನ್ನು ನಿಗದಿ ಮಾಡುವ ಅಧಿಕಾರ ಕೋರ್ಟಿಗೆ ಏನಿತ್ತು, ಅದನ್ನು ಆ ಪ್ರಕಾರ ಕೋರ್ಟಿನಿಂದ ಮೊಟಕು ಮಾಡಿದೆ. ಒಬ್ಬ ಯುವಕನು ಸರ್ಕಾರೀ ನೌಕರಿಗೆ ಬಂದಮೇಲೆ ಆತನ ಸರ್ವಿಸ್ ಕಂಡೀಷನ್‌ಗಳನ್ನು ಸರ್ಕಾರ ವಿಚಾರ ಮಾಡುತ್ತದೆ. ಆದರೆ ಸರ್ಕಾರೀ ನೌಕರಿಗೆ ಹೋಗಬೇಕೆಂಬ ಮನುಷ್ಯ ನೌಕರಿಗೆ ಸೇರುವುದಕ್ಕೆ ಮೊದಲೇ ಅಂದರೆ ಸ್ಕೂಲು ಅಥವಾ ಕಾಲೇಜಿನಲ್ಲಿರುವಾಗಲೇ ತನ್ನ ಹುಟ್ಟಿದ ತಾರೀಖನ್ನು 3, 4 ಇಲ್ಲವೇ 5 ವರ್ಷಗಳಷ್ಟು ಹಿಂದಕ್ಕೆ ಹಾಕಿ ಮುಂದೆ ಅನುಕೂಲ ಪಡೆಯಬೇಕೆಂಬ ಉದ್ದೇಶದಿಂದ ಕೋರ್ಟಿಗೆ ಅರ್ಜಿ ಹಾಕಿ, ಡಿ.ಪಿ ಐ. ಅವರನ್ನು ಒಂದು ಪಾರ್ಟಿಯನ್ನಾಗಿ ಮಾಡುತ್ತಾನೆ. ನಾವು ಖಾಸಗೀ ಜನರ ಹುಟ್ಟಿದ ತಾರೀಖಿನ ಬಗ್ಗೆ ಕಳಕಳಿ ಮಾಡಿಕೊಳ್ಳಬೇಕಾಗಿಲ್ಲ. There are thousands and thousands and millions of people who are members of the public. We are not worried about their date of birth, ಆದುದರಿಂದ ಯಾರೂ ಸೀರಿಯಸ್ ಆಗಿ ಕನ್‌ಟೆಸ್ಟ್ ಮಾಡಲು ಹೋಗುವುದಿಲ್ಲ. ಆದರೆ ಸರ್ಕಾರೀ ಅಧಿಕಾರಿಯಾದರೆ ಆಗ ನಾವು ವಿಚಾರ ಮಾಡಿ ಮಾಡಬೇಕಾಗಿ ಬರುತ್ತದೆ. ಸರ್ಕಾರದ ನೌಕರಿಗೆ ಸೇರಿದ ಮೇಲೆ ಆತ ಹುಟ್ಟಿದ ತಾರೀಖಿನ ಬಗ್ಗೆ ಒಂದು ಸರ್ಟಿಫಿಕೇಟ್ ತಂದುಕೊಡುತ್ತಾನೆ. ಯಾವ ದುರುದ್ದೇಶದಿಂದ ಕೋರ್ಟಿನ ಮುಂದೆ ಹೇಳಿಕೆ ಕೊಟ್ಟು ಒಂದು ಅಫಿಡವಿಟ ಪಡೆದುಕೊಂಡಿರುತ್ತಾನೆ, ಅದನ್ನು ಸರ್ಕಾರದ ಕೆಲಸಕ್ಕೆ ಸೇರಿದ ಮೇಲೆ ದುರುಪಯೋಗ ಮಾಡಿಕೊಳ್ಳುವ ಅವಕಾಶವಿರುತ್ತದೆ ಆದ್ದರಿಂದ ಅದು ಸರಿಯಲ್ಲವೆಂದು ಈ ರೀತಿ ತಿದ್ದುಪಡಿ ಮಾಡಿರುವುದು. ಸರ್ಕಾರೀ ನೌಕರಿಗೆ ಸೇರಿದ ಮೇಲೆ ಆತನ ಹುಟ್ಟಿದ ತಾರೀಖು ಎಷ್ಟು ಸರಿಯಾಗಿದೆ. ಎಂಬತಕ್ಕಂಥ ಮಾಹಿತಿಯನ್ನು ತನ್ನ ಮೇಲ್ಪಟ್ಟ ಅಪಾಯಿಂಟಿಂಗ್ ಆಥಾರಿಟಿಗೆ ಆಕನ್‌ವಿನ್ಸ್ ಮಾಡಬೇಕಾಗುತ್ತದೆ. ನಂತರ ಅವರು ಅದನ್ನು ಫಿಕ್ಸ್ ಮಾಡುತ್ತಾರೆ.

3-00 P. M.

ಒಂದುವೇಳೆ ಅವರು ಮಾಡಿದಂತಹ ತೀರ್ಮಾನ ಸರಿಯಲ್ಲ ಎಂದು ಕಂಡು ಬಂದರೆ, ನಂತರ ಅಪಲೇಟ್ ಆಥಾರಿಟಿಯನ್ನು ಪ್ರೊವೈಡ್ ಮಾಡಿದ್ದೇವೆ. ಆ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಒಬ್ಬ ಜಡ್ಜ್ ಯೋಗ್ಯತೆಯುಳ್ಳ ಸ್ಪೆಷರ್ ಅಥಾರಿಟಿಯನ್ನು ಮಾಡಿದ್ದೇವೆ. ಆ ಸ್ಪೆಷರ್ ಅಫೀಸರಿಗೆ ಅವರು ಅಪೀಲ್ ಮಾಡಿ ಅವರ ಅಹವಾಲನ್ನು ಹೇಳಬಹುದು ಎಂದು ಈ ತಿದ್ದುಪಡಿಯಲ್ಲಿದೆ. ಅಮೇಲೆ ಅವರು ತೀರ್ಪು ಕೊಟ್ಟ ಮೇಲೆ ಅದು ಫೈನರ್ ಆಗುತ್ತದೆ. ಆದ್ದರಿಂದ ಆ ಒಂದು ಸನ್ನಿವೇಶವನ್ನು ದುರುಪಯೋಗ ಮಾಡಿಕೊಳ್ಳತಕ್ಕದನ್ನು ತಪ್ಪಿಸುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆಯೇ ವಿನಾ ಮಾನ್ಯ ಸದಸ್ಯರೊಬ್ಬರು ಹೇಳುವಹಾಗೆ ಯಾರಿಗೂ ತೊಂದರೆಯನ್ನು ಮಾಡಬೇಕು ಎನ್ನುವ ಉದ್ದೇಶದಿಂದ ಅಲ್ಲ. ಸರ್ಕಾರಿ ನೌಕರರು ತಮಗೆ ಮುಂದೆ ಏನೋ

ಅನುಕೂಲವಾಗುತ್ತದೆ ಎಂದು ಮನಸ್ಸಿನಲ್ಲಿಟ್ಟುಕೊಂಡು ಕೋರ್ಟಿಗೆ ಅರ್ಜಿ ಹಾಕುತ್ತಾನೆ. ಆಲ್ಲಿ ಕಂಟೆಸ್ಟೆಂಟ್ಸ್ ಯಾರೂ ಇಲ್ಲದೆ ಹೋದರೆ ಆಗ ಕೋರ್ಟ್ ಇದು ಸುಳ್ಳು ಎಂದು ತಿಳಿದುಕೊಂಡು ತೀರ್ಮಾನ ಕೊಡುತ್ತಾರೆ. ಆದ್ದರಿಂದ ಅಂಥಾ ಸನ್ನಿವೇಶಗಳನ್ನು ತಪ್ಪಿಸಬೇಕು ಎನ್ನುವ ಸದುದ್ದೇಶದಿಂದ ಇದನ್ನು ತಂದಿದ್ದೇವೆಯೇ ವಿನಾ ಮತ್ತೇನೂ ಇಲ್ಲ. ಈ ವಿಷಯದಲ್ಲಿ ಯಾರ ಮೇಲೆಯೂ ನಮಗೆ ಆಕ್ಷೇಪವಿಲ್ಲ. ಎಲ್ಲರೂ ನಮ್ಮವರೇ ಎಂದು ನಾನು ಇಷ್ಟು ಪ್ರಾರ್ಥನೆ ಮಾಡಿಕೊಂಡು ಇದಕ್ಕೆ ಮಾನ್ಯ ಸಭೆಯವರು ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.— ಈಗ ಯಾರಾದರೂ ಒಬ್ಬರು ಖಾಸಗೀ ಮನುಷ್ಯರು ತಮ್ಮ ವಯಸ್ಸಿನ ಬಗ್ಗೆ ಸಂಶಯ ಬಂದು ತನ್ನ ಹುಟ್ಟಿದ ತಾರೀಖನ್ನು ಬದಲಾವಣೆ ಮಾಡಿಕೊಳ್ಳ ಬೇಕಾದರೆ ಕೋರ್ಟಿನಲ್ಲಿ ಅಫಿಡವಿಟ್ ಕೊಟ್ಟು ತನ್ನ ವಯಸ್ಸನ್ನು ಡಿಕ್ಲೇರ್ ಮಾಡಬೇಕು ಎಂದು ಕೋರ್ಟನ್ನು ಕೇಳಿಕೊಳ್ಳುತ್ತಾರೆ. ಹಾಗೆಯೆ ತಮ್ಮ ಹೆಸರನ್ನು ಬದಲಾವಣೆ ಮಾಡಿಕೊಳ್ಳ ಬೇಕಾದರೂ ಗೆಜೆಟ್‌ನೋಟಿಫಿಕೇಷನ್ ಮಾಡಬೇಕು. ಇಂಥಾ ಸಂದರ್ಭದಲ್ಲಿ ಪ್ರೈವೇಟ್ ಪೀಪಲ್ ತಮ್ಮ ಹುಟ್ಟಿದ ತಾರೀಖನ್ನೂ ಬದಲಾವಣೆ ಮಾಡುವ ಬಗ್ಗೆ ಕೋರ್ಟಿಗೆ ಅಫಿಡವಿಟ್ ಹಾಕಿದಾಗ ಗೌರ್ನಮೆಂಟ್ ಅಡ್ವೋಕೇಟ್ ಜನರಲ್ ಅಬ್ಜೆಕ್ಷನ್ ಹಾಕಿ, ರೆಕಾರ್ಡ್ಸ್ ಎಲ್ಲಾ ಪರಿಶೀಲ್ಸಿ ಮಾಡಿ, ಅದು ಗೆಜೆಟ್‌ನಲ್ಲಿ ನೋಟಿಫಿಕೇಷನ್ ಬರಬೇಕಾದರೆ 2 ತಿಂಗಳು ಜೈಮ್ ತೆಗೆದುಕೊಳ್ಳುತ್ತಾರೆ. ಇದನ್ನು ಬೇಗ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

† SRI H. M. CHANNABASAPPA.—The Hon'ble Member is interested in the age or date of birth of a private individual. But I understand Government is interested in the date of birth of a Government servant. Supposing a private individual applies to the Court, files an affidavit and than requests the Court to declare his age, and when that is accepted it will be published in the Gazette, and a copy sent to the Advocate General. How are we interested in his date of birth?

SRI V. N. PATIL.—When a private individual wants to change his name, you require a gazette Notification. At the same time if a private indivdual wants to change his date of birth, is it not equally essential because he may be a future applicant for Government job?

SRI H.M. CHANNABASAPPA.—There is a difference between a Government servant and a private individual. There is no law relating to change in the name of a private person. but Government servants have to fulfil this condition.

MADAM SPEAKER.— I will put the consideration motion to the vote of the House. The question is,

"That the Karnataka State Servants (Determination of Age) (Amendment) Bill, 1975, be taken into consideration."

The Motion was adopted.

CLAUSE 2 & 3

MADAM SPEAKER.—I will take up consideration of the Bill, clause by clause. The question is,

That clauses, 2, and 3 do stand part of bill.

The Motion was adopted.

Clauses 2 and 3 were added to the Bill.

CLAUSE 1, etc.,

MADAM SPEAKER.—The question is:

"That Clause 1, the long Title, the Preamble and the Enacting Formula, do stand part of the Bill."

The Motion was adopted.

Clause 1, the long Title, the Preamble and the Enacting Formula were added to the Bill.

MOTION TO PASS

SRI H.M. CHANNABASAPPA.— I beg to move,

"That the Karnataka State Servants (Determination of Age) (Amendment) Bill, 1977 be passed."

MADAM SPEAKER.— The question is,

"That the Karnataka State Servants (Determination of Age) (Amendment) Bill, 1977 be passed."

The Motion was adopted and the Bill was passed.

MADAM SPEAKER.— Now, the House stands adjourned to meet tommorrow at One of the Clock.

The House adjourned at Thirty Five Minutes Past Three of the Clock to meet again at One of the Clock on Tuesday the 19th July 1977.